OS No.95/2018 PW-**3**

**ದಿನಾಂಕ 30.03.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಯವರ ಪರ ಶ್ರೀ ಕೆ ಟಿ ಟಿ ವಕೀಲರಿಂದಃ**

ನಾನು 25 ವರ್ಷಗಳಿಂದ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ನಾನು ಪತ್ರ ಗಳ drafting ಗಳನ್ನು ಮಾಡುತ್ತೇನೆ. ನನ್ನ ಬಳಿ ವಾದಿಯವರು ಮತ್ತು 1 ನೇ ಪ್ರತಿವಾದಿಯವರು ಬಂದು ದಾಖಲೆ ಮಾಡಿಕೊಡುವಂತೆ ಭೇಟಿ ಮಾಡಿರುತ್ತಾರೆ. ನಾನು ಆರ್ ಟಿ ಸಿ, ಆಧಾರ್ ಕಾರ್ಡ್ ದಾಖಲಾತಿಗಳನ್ನು ಪಡೆದುಕೊಂಡು ?ಮತ್ತು 1 ನೇ ಪ್ರತಿವಾದಿಯವರು ಆಸ್ತಿಯ ಬಗ್ಗೆ ನೀಡಿದ ಮಾಹಿತಿಯನ್ನು ಪಡೆದು ದಾಖಲೆಯನ್ನು ಮಾಡಿಕೊಟ್ಟಿರುತ್ತೇನೆ. ವಾದಿಯವರು ಸದರಿ ದಾಖಲೆಯಾಗುವ ಮೊದಲು ದಾವಾ ಆಸ್ತಿಯನ್ನು ಖರೀದಿ ಮಾಡಬಹುದೇ ಎನ್ನುವ ಬಗ್ಗೆ ಅಭಿಪ್ರಾಯವನ್ನು ನನ್ನ ಬಳಿ ಕೇಳಿಲ್ಲ. ನಾನು ಸದರಿ ಕರಾರನ್ನು ಬರೆದುಕೊಟ್ಟಿರುವುದನ್ನು ಹೊರತುಪಡಿಸಿದರೆ ದಾವಾ ಸ್ವತ್ತನ್ನು ಖರೀದಿ ಮಾಡಬಹುದೇ ಎನ್ನುವ ಅಭಿಪ್ರಾಯವನ್ನು ನೀಡಿಲ್ಲ ಕಾರಣ ವಾದಿಯವರು ನನ್ನ ಬಳಿ ಕೇಳಿಲ್ಲ. 1 ನೇ ಪ್ರತಿವಾದಿಯವರು ನೀಡಿದ ಬಾಯಿ ಮಾತಿನ ಮಾಹಿತಿಯಂತೆ ಕರಾರನ್ನು ತಯಾರಿಸಿರುತ್ತೇನೆ. ನಿಪಿ-1 ರಲ್ಲಿ ರಾಜುರವರ ಪಿತ್ರಾರ್ಜಿತ ಸ್ವತ್ತು ಎಂದು ನಮೂದಿಸಿದ್ದು 1 ನೇ ಪ್ರತಿವಾದಿ ರಾಜುರವರ ಕುಟುಂಬದ ಸದಸ್ಯರ ಸಹಿಯ ಅವಶ್ಯಕತೆ ಇದೆ ಎನ್ನುವ ಬಗ್ಗೆ ಯಾವುದೇ ಅಭಿಪ್ರಾಯವನ್ನು ಅವರು ಕೇಳಿಲ್ಲ ಆದ್ದರಿಂದ ನಾನು ಹೇಳಿಲ್ಲ. ಸದರಿ ದಾಖಲೆ ಮಾಡುವ ಸಮಯದಲ್ಲಿ ಪ್ರತಿವಾದಿಯವರು ಮತ್ತು ವಾದಿಯವರ ಜೊತೆ 3 ಜನರು ಇದ್ದರು ಆದರೆ ಅವರ ಪರಿಚಯವಿಲ್ಲ. ಸದರಿ ದಾಖಲೆ ಮಾಡುವ ಮೊದಲು ವಾದಿಯವರು ಮತ್ತು 1 ನೇ ಪ್ರತಿವಾದಿಯವರು ಯಾರೂ ಪರಿಚಯವಿರಲಿಲ್ಲ. ಸದರಿ 1 ನೇ ಪ್ರತಿವಾದಿಯಾದ

ರಾಜುರವರ ಮಕ್ಕಳುಗಳು ಮತ್ತು ಹೆಂಡತಿ ಬಂದಿರಲಿಲ್ಲ. ವಾದಿಯವರು ಮತ್ತು 1 ನೇ ಪ್ರತಿವಾದಿಯವರು ನನ್ನ ಕಛೇರಿಗೆ ಮದ್ಯಾಹ್ನ 12.00 ಗಂಟೆಯ ಸಮಯಕ್ಕೆ ಬಂದಿರುತ್ತಾರೆ. Draftting ಆದ ನಂತರ ನಾನು ಸಂಜೆ 4.00 ಗಂಟೆಯ ಸಮಯದಲ್ಲಿ ಸ್ಟಾಂಪ್ ಪೇಪರ್ ತರಲು ಹೇಳಿರುತ್ತೇನೆ. ಮಧ್ಯಾಹ್ನ 12.00 ಗೆ ಬಂದವರು ಮಾಹಿತಿಯನ್ನು ಕೊಟ್ಟು ನಂತರ ಸ್ಟಾಂಪ್ ಪೇಪರ್ ತರುತ್ತೇನೆಂದು ಎಂದು ಮಧ್ಯದ ಅವಧಿಯಲ್ಲಿ ಹೋಗಿರುತ್ತಾರೆ ನಂತರ 4 ಗಂಟೆಗೆ ಬಂದಿರುತ್ತಾರೆ. 1 ನೇ ಪ್ರತಿವಾದಿ ರಾಜುರವರು ನಮ್ಮ ಕಛೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ11.07.2018 ರಂದು 1 ನೇ ಪ್ರತಿವಾದಿಯಾದ ರಾಜುರವರು ಅವರು ಕೆಲಸ ಮಾಡುವ ಕಛೇರಿಯಲ್ಲಿ ಹಾಜರಿದ್ದರು ನಮ್ಮ ಕಛೇರಿಗೆ ಬಂದಿರಲಿಲ್ಲ ಎಂದರೆ ಸಾಕ್ಷಿ ನಮ್ಮ ಕಛೇರಿಗೆ ಬಂದು ನಂತರ ಹೋಗಿರುತ್ತಾರೆಂದು ನುಡಿಯುತ್ತಾರೆ ಎಲ್ಲಿಗೆ ಹೋಗಿರುತ್ತಾರೆಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಮಧ್ಯಾಹ್ನ 12.00 ಗಂಟೆಗೆ 1 ನೇ ಪ್ರತಿವಾದಿ ಬಂದಾಗ 10 ನಿಮಿಷ ಮಾಹಿತಿಯನ್ನು ನೀಡಿ ಹೋಗಿರುತ್ತಾರೆ ನಂತರ ಸಂಜೆ 4.00 ಗಂಟೆಗೆ ಬಂದಿರುತ್ತಾರೆ. ನನ್ನ ಮುಂದೆ ಯಾವುದೇ ಹಣದ ವಹಿವಾಟು ನಡೆದಿಲ್ಲ ಎಂದರೆ ಹೌದು. ನನ್ನ ಮುಂದೆ ನಿಪಿ-1 ರಲ್ಲಿರುವ ಯಾವ ಸಹಿಗಳು ಆಗಿಲ್ಲ ಎಂದರೆ ಹೌದು. ನಾನು 2 ನೇ ವಾದಿಗೆ ವೆಂಕಟೇಶ್ ರವರಿಗೆ ಚಿರಪರಿಚಿತ ಎಂದರೆ ಸುಳ್ಳು. 2 ನೇ ವಾದಿಯ ಹೇಳಿಕೆಯ ಮೇರೆಗೆ ನಾನು ನಿಪಿ-1 ಅನ್ನು ತಯಾರಿಸಿರುತ್ತೇನೆಂದರೆ ಸಾಕ್ಷಿ 3 ಜನರು ನೀಡಿದ ಮಾಹಿತಿಯ ಆಧಾರದ ಮೇರೆಗೆ ನಿಪಿ-1 ರ ದಾಖಲೆಯನ್ನು ತಯಾರಿಸಿರುತ್ತೇನೆ. ನಾನುನಿಪಿ-1 ರ ದಾಖಲೆಯನ್ನು ತಯಾರಿಸಿದ ನಂತರ ಸದರಿ ದಾಖಲೆಗೆ ಪಕ್ಷಗಾರರ ಸಹಿಗಳನ್ನು ನನ್ನ ಸಮಕ್ಷಮ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಆದರೆ ನಾನು ಪಡೆದುಕೊಂಡಿಲ್ಲ. ಸದರಿ ದಿನ 1 ನೇ ಪ್ರತಿವಾದಿಯವರು ನನ್ನ ಕಛೇರಿಗೆ ಬಂದಿರದೇ ಇದ್ದರೂ ಕೂಡ ಬಂದಿದ್ದರು ಎಂದು 2 ನೇ ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು 2 ನೇ ವಾದಿಯ ಮಾತನ್ನು ಕೇಳಿಕೊಂಡು ಅವರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.